ಮತ್ತು ವಿನ್ಯಾಸಕ್ಕನುಸಾರವಾಗಿ ಸೇತುವೆಗಳ ನಿರ್ಮಾಣ ಹಾಗೂ ಮಳೆ ನೀರಿನ ಚರಂಡಿಗಳನ್ನು ನಿರ್ಮಾಣ ಮಾಡುವುದು. ಈ ಕಾಮಗಾರಿಗಳನ್ನು ಟೆಂಡರು ಮುಖಾಂತರ ವಿವಿಧ ಗುತ್ತಿಗೆದಾರರಿಗೆ ನೀಡಿದ್ದು, ಈ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಇದಲ್ಲದೆ, ಬೆಂಗಳೂರು ಮಹಾನಗರ ಪಾಲಿಕೆಯ 3 ನಗರಸಭೆಗಳು ಅಂದರೆ, ಕೆ.ಆರ್.ಪುರಂ, ಬ್ಯಾಟರಾಯನಪುರ ಹಾಗೂ ರಾಜರಾಜೇಶ್ವರಿನಗರ ನಗರ ಸಭೆಗಳ ವ್ಯಾಪ್ತಿಯಲ್ಲಿ ಮಳೆ ನೀರಿನ ಚರಂಡಿಗಳನ್ನು ಸುಮಾರು ರೂ.80.00 ಕೋಟಿಗಳ ವೆಚ್ಚದಲ್ಲಿ ಒಟ್ಟು 36.0 ಕಿ.ಮೀ. ಉದ್ದದ ಮಳೆ ನೀರು ಚರಂಡಿಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಇ) 2001ನೇ ಸಾಲಿನ ಜನಗಣತಿಯಂತೆ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ 100 ವಾರ್ಡ್‌ಗಳಲ್ಲಿನ ಜನಸಂಖ್ಯೆ. 43,01,326.

ಈ) ಮುಂದುವರೆದ ಬಡಾವಣೆಗಳ ವ್ಯಾಪ್ತಿಯು ಸಿ.ಎಂ.ಸಿ ಪ್ರದೇಶದಲ್ಲಿ ಇದ್ದು ಬೆಂಗಳೂರು ಮಹಾನಗರ ಪಾಲಿಕೆಯು ಕೆ.ಆರ್.ಪುರ, ಬ್ಯಾಟರಾಯನಪುರ ಹಾಗೂ ಆರ್.ಆರ್.ನಗರ ಬಡಾವಣೆಗಳಲ್ಲಿ ಕೂಡ ಮಳೆ ನೀರಿನ ಚರಂಡಿಗಳ ಪುನರ್ ನವೀಕರಣ ಕಾಮಗಾರಿಗಳನ್ನು ಸುಮಾರು 80.00 ಕೋಟಿ ರೂ.ವೆಚ್ಚದಲ್ಲಿ 36.00 ಕಿ.ಮೀ. ಚರಂಡಿಯನ್ನು ನವೀಕರಿಸುತ್ತಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಿಸಿದ ಬಡಾವಣೆಗಳಲ್ಲಿ ಮಳೆ ನೀರಿನ ಚರಂಡಿಯನ್ನು ನಿರ್ಮಿಸಲಾಗಿದೆ. ಹೊಸ ಬಡಾವಣೆಗಳಲ್ಲಿ ಮಳೆ ನೀರಿನ ಚರಂಡಿಯನ್ನು ನಿರ್ಮಿಲಾಗುತ್ತಿದೆ.

ಉ) 1. ವಾಹನಗಳು ಹಾಗೂ ಕಾರ್ಖಾನೆಗಳಿಂದ ಆಗುತ್ತಿರುವ ವಾಯುಮಾಲಿನ್ಯ ತಡೆಗಟ್ಟುವ ಕ್ರಮಗಳು.

2. ಜಲ ಮಾಲಿನ್ಯ ನಿಯಂತ್ರಣ ಕ್ರಮಗಳು.

3. ಘನತ್ಯಾಜ್ಯ ವಸ್ತು ನಿರ್ವಹಣೆ

4. ಕೆರೆ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಂಡು ಕೆರೆಯ ಪರಿಸರವನ್ನು ಕಾಪಾಡುವುದು.

5. ವೈದ್ಯಕೀಯ ತ್ಯಾಜ್ಯ ವಸ್ತುಗಳ ವಿಲೇವಾರಿ ಮಾಡುವುದು.

475 (751) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ ಕ್ಷೇತ್ರ):ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಪೋಲೀಸ್ ಇಲಾಖೆಯನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಆ) ಧರ್ಮಪೀರ ವರದಿಯನ್ನು ಎಷ್ಟು ಪ್ರಮಾಣದಲ್ಲಿ ಅನುಷ್ಠಾನಕ್ಕೆ ತರಲಾಗಿದೆ.

ಇ) ಪೊಲೀಸರಿಗೆ ಬೇರೆ ಸರ್ಕಾರಿ ನೌಕರರ ರೀತಿಯಲ್ಲಿ ಕೆಲಸದ ವೇಳೆಯನ್ನು ನಿಗಧಿ ಪಡಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) 24 ಗಂಟೆಗಳ ಕಾಲ ಕಾರ್ಯನಿರ್ವಹಿಸುವ ಪೊಲೀಸರಿಗೆ ವಿಶೇಷ ಭತ್ಯೆಯನ್ನು ನೀಡಲಾಗುತ್ತಿದೆಯೇ;

ಉ) ಬೆಂಗಳೂರು ನಗರದ ಬೆಳವಣಿಗೆಗೆ ತಕ್ಕಂತೆ ಸಮಗ್ರ ಪೊಲೀಸ್ ವ್ಯವಸ್ಥೆಯನ್ನು ಚುರುಕುಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಸಚಿವರು):

ಅ) ಆಧುನೀಕರಣ ಯೋಜನೆಯಡಿಯಲ್ಲಿ ಪೊಲೀಸರಿಗೆ ವಸತಿಗೃಹ ನಿರ್ಮಾಣ, ವಸತಿಯೇತರ ಕಟ್ಟಡ ನಿರ್ಮಾಣ, ವಾಹನಗಳು, ಸಂಪರ್ಕ ಮತ್ತು ಸಾಧನೆಗಳು, ಗಣಕೀಕರಣ, ಅತ್ಯಾಧುನಿಕ ಉಪಕರಣಗಳು ತರಬೇತಿ ವಿಭಾಗಕ್ಕೆ ಮೂಲಭೂತ ಸೌಕರ್ಯಗಳು, ವಿಧಿ ವಿಜ್ಞಾನ ಪ್ರಯೋಗಾಲಯ ಮತ್ತು ಬೆರಳು ಮುದ್ರೆ ಸಂಗ್ರಾಲಯಕ್ಕೆ ಅತ್ಯುತ್ತಮವಾದ ಉಪಕರಣಗಳನ್ನು ಒದಗಿಸಿ ಪೊಲೀಸ್ ಇಲಾಖೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಸರ್ಕಾರ ಕ್ರಮ ಕೈಗೊಂಡಿರುತ್ತದೆ.

ಆ) ಧರ್ಮವೀರ ಸಮಿತಿಯ ನ್ಯಾಷನಲ್ ಪೊಲೀಸ್ ಕಮೀಷನ್ ತಮ್ಮ 8ನೇ ಹಾಗೂ ಅಂತಿಮ ವರದಿಯನ್ನು 1981 ನೇ ಇಸವಿಯಲ್ಲಿ ನೀಡಿದ್ದು ಅದರಲ್ಲಿನ ಕೆಲವು ಪ್ರಮುಖ ಅಂಶಗಳೇನೆಂದರೆ ಜನಸಾಮಾನ್ಯರಿಗೆ ಉತ್ತಮ ರಕ್ಷಣೆ ಒದಗಿಸುವ ಮತ್ತು ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ನಿಟ್ಟಿನಲ್ಲಿ ಪೊಲೀಸ್ ವ್ಯವಸ್ಥೆಯನ್ನು ಅಭಿವೃದ್ಧಿ/ ಸುಧಾರಿಸುವ ಬಗ್ಗೆ ಕ್ರಮಗಳನ್ನು ಸೂಚಿಸಿದ್ದು, ಆ ಸೂಚನೆಗಳನ್ನು ಮೇಲ್ಕಂಡಂತೆ ಅನುಷ್ಠಾನಕ್ಕೆ ತರಲಾಗುತ್ತಿದೆ ಮತ್ತು ಅನುಷ್ಠಾನಕ್ಕೆ ಸಮಗ್ರ ಅಭಿವೃದ್ಧಿ ಯೋಜನೆ ಹಾಕಿಕೊಂಡಿರುತ್ತದೆ.

ಧರ್ಮವೀರ ಆಯೋಗದ (ರಾಷ್ಟ್ರೀಯ ಪೋಲೀಸ್ ಆಯೋಗದ) ವರದಿಯ ಭಾಗ–24 ರಲ್ಲಿ ಪೊಲೀಸ್ ಆಧುನೀಕರಣದ ಬಗ್ಗೆ ಶಿಫಾರಸ್ಸುಗಳು ಇರುತ್ತವೆ.

ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಪೊಲೀಸ್ ಇಲಾಖೆಯ ಆಧುನೀಕರಣಕ್ಕೆ ಸಂಬಂಧಿಸಿದಂತೆ, ಪ್ರತಿ ವರ್ಷವು ಅನುದಾನವನ್ನು ಬಿಡುಗಡೆ ಮಾಡುತ್ತಿದೆ. ರಾಜ್ಯ ಸರ್ಕಾರವು ಸಹ ಪೊಲೀಸ್ ಇಲಾಖೆಯ ಆಧುನೀಕರಣದ ನಿಟ್ಟಿನಲ್ಲಿ ಉತ್ತಮ ಪ್ರಗತಿಯನ್ನು ಸಾಧಿಸಿರುತ್ತದೆ. 2002 ರಿಂದ 2007 ರವರೆಗೆ ಆಧುನೀಕರಣದ ಬಗ್ಗೆ ಕ್ರಿಯಾ ಯೋಜನೆಯನ್ನು ತಯಾರಿಸಿದ್ದು, ಕೇಂದ್ರ ಸರ್ಕಾರವು ಇದಕ್ಕೆ ಅನುಮೋದನೆಯನ್ನು ಒಪ್ಪಿಗೆಯನ್ನು ನೀಡಿರುತ್ತದೆ.

ಇ) ಮತ್ತು ಈ) ಪೊಲೀಸ್ ಇಲಾಖೆಯ ಸಿಬ್ಬಂದಿಗಳು ಸಾಮಾನ್ಯವಾಗಿ 8 ಗಂಟೆಗಳ ಕಾಲ ಕಾರ್ಯನಿರ್ವಹಿಸುತ್ತಿದ್ದು, ಕೆಲವೊಂದು ತುರ್ತು ಕಾರ್ಯ ಸಂದರ್ಭದಲ್ಲಿ ಹೆಚ್ಚಿನ ವೇಳೆಯಲ್ಲಿ ಕಾರ್ಯ ನಿರ್ವಹಿಸಬೇಕಾಗಿದ್ದು, ವಾರದ ರಜೆಯನ್ನು ನೀಡಲು ಆಗದಿದ್ದ ಪಕ್ಷದಲ್ಲಿ ಅಂತಹ ಸಿಬ್ಬಂದಿಗಳಿಗೆ ವಾರದ ಭತ್ಯೆಯಾಗಿ ರೂ. 50.00 ನ್ನು ವಿಶೇಷ ಭತ್ಯೆಯಾಗಿ ಒದಗಿಸಲಾಗುತ್ತಿದೆ.

ಉ) ಬೆಂಗಳೂರು ನಗರದ ಬೆಳವಣಿಗೆಗೆ ತಕ್ಕಂತೆ ಪೊಲೀಸ್ ವ್ಯವಸ್ಥೆಯನ್ನು ಚುರುಕುಗೊಳಿಸಲು ಈ ಕೆಳಕಂಡ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ:-

1) ಬೆಂಗಳೂರು ನಗರದಲ್ಲಿ ಹೊಸದಾಗಿ ಸಿಬ್ಬಂದಿ ಮತ್ತು ಇತರೆ ಸಲಕರಣೆಗಳೊಂದಿಗೆ ಆಗ್ನೇಯ ವಿಭಾಗ ಸೃಜನೆ.

2) ಬೆಂಗಳೂರು ಸಂಚಾರಿ ವ್ಯವಸ್ಥೆಯನ್ನು ಬಲವೃದ್ಧಿಗೊಳಿಸಲು ಬೆಂಗಳೂರು ನಗರದ ಸಂಚಾರ ವಿಭಾಗಕ್ಕೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್.ಡಿ/136/ಪಿಒಪಿ/2005, ದಿ: 22.12.2005 ರಲ್ಲಿ ಪಿಐ-6, ಪಿ.ಎಸ್.ಐ-82, ಎ.ಎಸ್.ಐ.-214, ಹೆಚ್.ಸಿ-390 ಮತ್ತು ಪಿಸಿ-300 ಒಟ್ಟಾರೆ 992 ಹುದ್ದೆಗಳ ಮಂಜೂರಾತಿ.

3) ಬೆಂಗಳೂರು ನಗರದಲ್ಲಿ ಹೊಸದಾಗಿ ಸರ್ಕಾರಿ ಆದೇಶ ಸಂಖ್ಯೆ :ಹೆಚ್.ಡಿ/9/ಪಿಒಪಿ/2003, ದಿನಾಂಕ: 2.2.2005ರಲ್ಲಿ ಚೆನ್ನಮ್ಮನಕೆರೆ ಅಚ್ಚುಕಟ್ಟು ಪ್ರದೇಶ ಪೊಲೀಸ್ ಠಾಣೆ ಮಂಜೂರಾತಿ, ಇತ್ಯಾದಿ.

475 (751) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ ಕ್ಷೇತ್ರ):ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕರ್ನಾಟಕ ಸಮಗ್ರ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರಕ್ಕೆ ಕರ್ನಾಟಕ ಸರ್ಕಾರ ಯಾವ ಯಾವ ಬೇಡಿಕೆಗಳನ್ನು ಸಲ್ಲಿಸಿದೆ.

ಆ) ಕರ್ನಾಟಕ ಸಮಗ್ರ ರೈಲ್ವೆ ಬೇಡಿಕೆಗಳು ಯಾವುವು;

ಇ) ಕೇಂದ್ರ ಸರ್ಕಾರದ ರೈಲ್ವೆ ಬೇಡಿಕೆಗಳ ಬಗ್ಗೆ ಕೈಗೊಂಡಿರುವ ಕ್ರಮಗಳೇನು;

ಈ) ಮೆಟ್ರೋ ರೈಲ್ವೆ ಯೋಜನೆಯ ಗಾತ್ರವೆಷ್ಟು; ಇದರ ಮೊತ್ತವೆಷ್ಟು;

ಉ) ಇದನ್ನು ಯಾವಾಗ ಜಾರಿಗೊಳಿಸಲಾಗುವುದು:

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯ ಮಂತ್ರಿಗಳು):

ಅ) ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದಂತೆ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಸ್ಯಾಟ್‌ಲೈಟ್ ವರ್ತುಲ ರಸ್ತೆ ಸುಮಾರು 282 ಕಿ.ಮೀ. ಮತ್ತು ಮಧ್ಯಂತರ ವರ್ತುಲ ರಸ್ತೆ ಸುಮಾರು 178 ಕಿ.ಮೀ. ರಸ್ತೆಗಳನ್ನು ನಿರ್ಮಿಸಲು ಪ್ರಸ್ತಾವನೆಯನ್ನು ಭಾರತ ಸರ್ಕಾರಕ್ಕೆ ಕಳುಹಿಸಿದೆ.

ಆ) ಮಾನ್ಯ ಮುಖ್ಯ ಮಂತ್ರಿಯವರು ದಿನಾಂಕ 14.2.2006ರಂದು ಮಾನ್ಯ ಕೇಂದ್ರ ರೈಲ್ವೆ ಸಚಿವರನ್ನು ದೆಹಲಿಯಲ್ಲಿ ಭೇಟಿ ಮಾಡಿ ರಾಜ್ಯದಲ್ಲಿನ ರೈಲ್ವೆ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸುವ ಬಗ್ಗೆ ಚರ್ಚಿಸಿ ಒಂದು ಮೆಮೊರ್ಯಾಂಡಮ್ ಅನ್ನು ಸಲ್ಲಿಸಿರುತ್ತಾರೆ. ಮೆಮೊರ್ಯಾಂಡಮ್‌ನಲ್ಲಿ ಪ್ರಸ್ತಾಪಿಸಿರುವ ರೈಲ್ವೆ ಯೋಜನೆಗಳು ಈ ಕೆಳಕಂಡಂತಿವೆ:

1. ಬೆಂಗಳೂರು-ಕೆಂಗೇರಿ-ಕೆಂಗೇರಿ-ರಾಮನಗರಂ ಜೋಡಿ ರೈಲು ಮಾರ್ಗ

2. ಬಿಜಾಪುರ -ಗದಗ್ ರೈಲು ಗೇಜು ಪರಿವರ್ತನೆ ಯೋಜನೆ